1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು

ಸಿ.ಸಿ.ನಂ.1047/2020

ದಿನಾಂಕ: 17-09-2025

ಪಿರ್ಯಾದಿ :- ಕೊಣನೂರು ಪೊಲೀಸರು

: ವಿರುದ್ಧ :

ಆರೋಪಿಗಳು :- ವೆಂಕಟೇಶ ಬಿನ್ ರಾಮೇಗೌಡ

ದೋಷಾರೋಪಣೆ

ನಾನು ಶ್ರೀ. ರಘು.ಎಂ. ಬಿ.ಎ.ಎಲ್.ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು ಆದ ನಾನು ಆರೋಪಿಯಾದ ಃ

ವೆಂಕಟೇಶ ಬಿನ್ ರಾಮೇಗೌಡ<br>
ಸುಮಾರು 43 ವರ್ಷ<br>
ವಾಸ: ಹಾನಗಲ್ಲು ಗ್ರಾಮ,<br>
ದೊಡ್ಡಮಗ್ಗೆ ಹೋಬಳಿ,<br>
ಅರಕಲಗೂಡು ತಾಲ್ಲೂಕು.

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ಕೊಣನೂರು ಪೊಲೀಸ್ ಠಾಣಾ ವ್ಯಾಪ್ತಿಯ ಹಾನಗಲ್ಲು ಗ್ರಾಮದ ವಾಸಿ ಸಾಕ್ಷಿ.1 ರವರ ತಮ್ಮ ಲವಕುಮಾರ ರವರು ದಿನಾಂಕ: 10.08.2020 ರಂದು ಕೋರೋನಾದಿಂದ ಮರಣ ಹೊಂದಿದ ಕಾರಣ, ಸರ್ಕಾರಿ ಆದೇಶದಂತೆ ಅವರ ಮನೆಯನ್ನು 14 ದಿನಗಳವರೆಗೆ ಮುದ್ರಿಸಿದ (ಸೀಲ್ ಡೌನ್ ಮಾಡಿದ ) ಹಿನ್ನೆಲೆಯಲ್ಲಿ ಎಲ್ಲರೂ ಸಾಕ್ಷಿ.1 ರವರ ಅಣ್ಣನ ಮನೆಯಲ್ಲಿ ವಾಸವಾಗಿದ್ದು , ಈ ಸಮಯದಲ್ಲಿ ಆರೋಪಿಯಾದ ನೀವು ದಿನಾಂಕ: 24.08.2020 ರಂದು ರಾತ್ರಿ ಸುಮಾರು 12.00 ಗಂಟೆ ಸಮಯದಲ್ಲಿ ಸಾಕ್ಷಿ.1 ರವರ ಮನೆಯ ಬಳಿ ಹೋಗಿ ಮನೆಯ ಹಿಂದಿನ ಬಾಗಿಲನ್ನು ಕಬ್ಬಿಣದ ಹಾರೆಯಿಂದ ಮೀಟಿ ತೆಗೆದು ಕಳ್ಳತನ ಮಾಡುವ ಉದ್ದೇಶದಿಂದ ಮನೆಯ

ಒಳಗೆ ಪ್ರವೇಶಿಸಿರುತ್ತೀರಿ. ಆದುದರಿಂದ ಭಾ.ದಂ.ಸಂ.ಕಲಂಃ 457 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಾ ಎಂದು ಆಪಾಧಿಸಲಾಗಿದೆ.

ಮೇಲೆ ಹೇಳಿದ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರ ಮನೆಯ ಒಳಗೆ ಹೋಗಿ ಮನೆಯ ರೂಮಿನ ಬೀರುವಿನಲ್ಲಿ ಇಟ್ಟಿದ್ದ ಸುಮಾರು ರೂ.18,26,775/- ರೂ ಬೆಲೆಯ 405.950 ಗ್ರಾಂ ತೂಕದ ಒಟ್ಟು 31 ಬಗೆಯ ಚಿನ್ನದ ಆಭರಣಗಳನ್ನು ಹಾಗೂ ರೂ.20,000/- ರೂ ನಗದು ಹಣವನ್ನು ಮತ್ತು 2 ನೇ ರೂಮಿನ ಬೀರುವಿನಲ್ಲಿ ಇಟ್ಟಿದ್ದ ಸುಮಾರು 1,57,630/- ರೂ ಬೆಲೆಯ 2.866 ಗ್ರಾಂ ತೂಕದ ಒಟ್ಟು 16 ಬಗೆಯ ಬೆಳ್ಳಿಯ ಸಾಮಾಗ್ರಿಗಳನ್ನು ಕಳ್ಳತನ ಮಾಡಿರುತ್ತೀರಿ. ಆದುದರಿಂದ ಭಾ.ದಂ.ಸಂ.ಕಲಂಃ 380 ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಾ ಎಂದು ಆಪಾಧಿಸಲಾಗಿದೆ.

(ಈ ಆರೋಪಣೆಯ ಅಂಶಗಳನ್ನು ಶೀಘ್ರಲಿಪಿಗಾರರಿಗೆ **ಉಕ್ತಲೇಖನ** ನೀಡಿ ಬೆರಳಚ್ಚು ಮಾಡಿ ತಿದ್ದುಪಡಿ ಮಾಡಿದ ನಂತರ ಸದರಿ ಆರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಈ ಹೊತ್ತು ದಿನಾಂಕಃ 17ನೇ ಸೆಪ್ಟೆಂಬರ್ -2025 )

1ನೇ ಹೆಚ್ಚುವರಿ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ, ಅರಕಲಗೂಡು.

ಆರೋಪಿಯ ಹೇಳಿಕೆ

ವೆಂಕಟೇಶ ಬಿನ್ ರಾಮೇಗೌಡ

ಪ್ರಶ್ನೆ **1.** ನಿನಗೆ ಓದಿ ತಿಳಿಸಿದ ಆರೋಪಣೆ ಕೇಳಿಸಿಕೊಂಡಿರಾ **?** ತಿಳಿಯಿತೇ **?**

ಉತ್ತರ **: –**

ಪ್ರಶ್ನೆ **2.** ಸದರಿ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ**?** ವಿಚಾರಣೆಯಾಗಬೇಕೆ

ಉತ್ತರಃ

1ನೇ ಹೆಚ್ಚುವರಿ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ, ಅರಕಲಗೂಡು.